ಶಿಕ್ಷಕರ ಮತ್ತು ಪೋಷಕರ ಅಂಕಣ

ಶಿಕ್ಷಣ

ಮೌಲ್ಯಗಳ ಸಂವಹನದಲ್ಲಿ ತೊಡಕುಗಳು:

ಕಾರಣ ಮತ್ತು ಪರಿಹಾರ

ನಾವು ಗುಲಾಮರು

ನಮ್ಮ ಮಕ್ಕಳು ಉನ್ನತ ಮೌಲ್ಯಗಳನ್ನು ಜೀವನದಲ್ಲಿ ಸಹಜವಾಗಿ ಅಳವಡಿಸಿಕೊಳ್ಳಲು ಸಾಧ್ಯವಾಗುವಂತಹ ವಾತಾವರಣವನ್ನು ನಿರ್ಮಿಸಲು ನಮಗೇಕೆ ಸಾಧ್ಯವಾಗಿಲ್ಲ? ಹಾಗೆ ಮಾಡುವ ಸ್ವಾತಂತ್ರ್ಯ ನಮಗಿಲ್ಲದಿರುವುದೇ ಇದಕ್ಕೆ ಮೂಲಭೂತ ಕಾರಣ. ನಾವಿನ್ನೂ ದಾಸ್ಯಶೃಂಖಲೆಯಲ್ಲಿದ್ದೇವೆ. ಹೌದು, ಬ್ರಿಟಿಷರಿಂದ ನಾವು ಸ್ವಾತಂತ್ರ್ಯ ಪಡೆದೆವು. ಈಗ ಅಭಿವೃದ್ಧಿ ಪಥದಲ್ಲಿ ದಾಪುಗಾಲು ಹಾಕುತ್ತ ಮುಂದು ವರೆದು ಸಾಗುತ್ತಿದ್ದೇವೆ, ಸಾಕಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸುತ್ತಿದ್ದೇವೆ ಕೂಡ. ನಮ್ಮ ಉದ್ಯಮಗಳು ಸ್ವಂತಕಾಲಿನ ಮೇಲೆ ನಿಲ್ಲುವ ಸಾಮರ್ಥ್ಯ ವನ್ನು ಪಡೆದಿವೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ನಾವು ಜಗತ್ತಿನ ಇತರ ದೇಶಗಳೊಂದಿಗೆ ಸ್ಪರ್ಧಿಸುತ್ತಿದ್ದೇವೆ. ಜಾಗತಿಕ ಆರ್ಥಿಕತೆ ಮತ್ತು ರಾಜಕೀಯದಲ್ಲಿ ಕೂಡ ನಾವು ಹಿಂದೆ ಬಿದ್ದಿಲ್ಲ. ಆದರೂ ಶ್ರೀಮಂತ ಮತ್ತು ಬಡವ, ಸುಶಿಕ್ಷಿತ ಮತ್ತು ಅಶಿಕ್ಷಿತ, ಯುವಜನ ಮತ್ತು ವೃದ್ಧ – ಹೀಗೆ ಸಮಾಜದ ಎಲ್ಲರೂ ಯಾವುದೋ ಒಂದು ಬಂಧನದಲ್ಲಿ ಇರುವಂತೆ ತೋರುತ್ತಿದೆ.

ನಿಜವಾಗಿ ಹೇಳುವುದಾದರೆ, ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟವು ಇನ್ನೂ ಕೊನೆಗೊಂಡಿಲ್ಲ ಎಂದೇ ಹೇಳಬೇಕು. ಏಕೆಂದರೆ, *"ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಗಳಿಸಬಹುದು. ಆದರೆ, ತನ್ನ ಭಾವೋದ್ರೇಕಗಳಿಗೂ ಆಪೇಕ್ಷೆಗಳಿಗೂ ಗುಲಾಮ ನಾಗಿರುವವನು ಸ್ವಾತಂತ್ರ್ಯದ ಪರಿಶುದ್ಧ ಆನಂದವನ್ನು ಅನುಭವಿಸಲು ಸಾಧ್ಯವಿಲ್ಲ."*

ಭೋಗ ಮತ್ತು ಲೋಭ

ಇಂದ್ರಿಯಗಳಿಗೆ ದಾಸನಾಗುವುದರಿಂದ, ಅಸೂಯೆ, ಕೋಪ, ಕ್ರೌರ್ಯ, ಭಯ, ಅಜ್ಞಾನ, ದುರಹಂಕಾರ, ವಿಷಯಾಭಿಲಾಶೆ, ಶಾರೀರಿಕ ಬಯಕೆಗಳು, ಅಪರಿಪೂರ್ಣತೆ ಹಾಗೂ ಸ್ವಾರ್ಥಗಳಿಗೆ ಉತ್ತೇಜನ ಸಿಗುತ್ತದೆ. ಈ ಗುಣಸ್ವಭಾವಗಳ ಪರಿಣಾಮವಾಗಿ, ಜೀವನದಲ್ಲಿ ವಿಶಾಲ ದೃಷ್ಟಿ ಉಂಟಾಗುವುದಿಲ್ಲ; ಸ್ವಂತ ಸಂತೋಷ, ಯಶಸ್ಸು ಮತ್ತು ಸುರಕ್ಷಿತತೆಗಳೇ ವ್ಯಕ್ತಿಗೆ ಮುಖ್ಯವಾಗಿ ತೋರುತ್ತವೆ. ಜನರ ಸ್ವಂತ ಹಿತಾಸಕ್ತಿಗಳು ಸಾಮಾಜಿಕ ಪರಿಸ್ಥಿತಿಯನ್ನು ಬದಲಾಯಿಸಿ, ಭ್ರಷ್ಟಾಚಾರ, ಅಪರಾಧ, ಶೋಷಣೆ, ಅಧಿಕಾರ, ಅಸಹನೆ ಹಾಗೂ ಸಂಘರ್ಷಗಳ ತಾಂಡವನೃತ್ಯಕ್ಕೆ ಅವಕಾಶಮಾಡಿಕೊಡುತ್ತವೆ. ಇಂತಹ ಕೆಟ್ಟ ಸ್ವಭಾವ ಗಳಿಂದ ಕೂಡಿದವನನ್ನು 'ಕಾಮ–ಲೋಭಬಂಧಿತ'ನೆಂದು ಶ್ರೀರಾಮ ಕೃಷ್ಣರು ಬಣ್ಣಿಸಿದ್ದಾರೆ. ಕಾಮ ಮತ್ತು ಲೋಭಗಳಿಂದ ನಮ್ಮ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳು ಕುಂದುತ್ತವೆ.

ನಮ್ಮ ಮಾರುಕಟ್ಟೆಗಳಲ್ಲಿ ಈಗ ಗ್ರಾಹಕರಿಗೆ ಏನು ಬೇಕಾದರೂ ಸಿಗುತ್ತದೆ. ಪ್ರತಿಯೊಬ್ಬರೂ ಏನಾದರೂ ಒಂದನ್ನು ಖರೀದಿಸಲು ಕಾತುರಪಡುತ್ತಾರೆ. ಜನರು ಶ್ರೀಮಂತರಾಗಿದ್ದಾರೆಂದು ಆರ್ಥಿಕ ತಜ್ಞರು ಸಂತೋಷಪಡುತ್ತಾರೆ. ಕೊಳ್ಳುವ ಸಾಮರ್ಥ್ಯ ಅಧಿಕವಾಗಿರುವುದು ಜನರ ಸಂತೋಷ ಹೆಚ್ಚಾಗಿರುವುದರ ಸಂಕೇತವೆಂದೂ ಕೆಲವರು ವಾದ ಮಾಡುತ್ತಾರೆ. ಆದರೆ, ಮುಖ್ಯವಾಗಿ ವ್ಯಕ್ತಿಯ ನೈತಿಕತೆ ದುರ್ಬಲ ವಾಗಿದ್ದಾಗ, ಹಣವು ಅವನ ಚಾರಿತ್ರ್ಯವನ್ನೇ ಕುಗ್ಗಿಸಬಹುದು. ಆಧುನಿಕ ಕಾಲದಲ್ಲಿ, ವ್ಯಕ್ತಿ "ಏನಾಗಿದ್ದಾನೆ?" ಎಂಬುದರ ಬದಲಾಗಿ, ಅವನಲ್ಲಿ "ಏನಿದೆ?" ಎಂಬುದನ್ನು ಆಧರಿಸಿ, ಅವನ ಯೋಗ್ಯತೆಯನ್ನು ಅಳೆಯ ಲಾಗುತ್ತಿದೆ. ಆದುದರಿಂದ, ಅನುಸರಿಸುವ ಮಾರ್ಗ ಯಾವುದಾದರೂ ಸರಿಯೇ, ಉನ್ನತ ಅಧಿಕಾರ ಹಾಗೂ ಸ್ಥಾನಮಾನಗಳನ್ನು ಗಳಿಸುವುದೇ ಈಗ ಎಲ್ಲರ ಹಂಬಲವಾಗಿದೆ. ಅದಕ್ಕಾಗಿ, ಅವರು ಅವಿಶ್ರಾಂತರಾಗಿ ಹೆಣಗುತ್ತಾರೆ.

> ಬ್ರಹ್ಮಚರ್ಯವೇ ಜನಾಂಗದ ಜೀವಾಳ. ವ್ಯಭಿಚಾರವೇ ಜನಾಂಗದ ಪ್ರಥಮ ಮೃತ್ಯುಚಿಹ್ನೆ ಎಂಬುದು ನಿಮಗೆ ಇತಿಹಾಸದಲ್ಲಿ ಕಾಣುವುದಿಲ್ಲವೇ? ಯಾವಾಗ ವ್ಯಭಿಚಾರವು ಒಂದು ಸಮುದಾಯ ದಲ್ಲಿ ಪ್ರವೇಶಿಸುವುದೋ, ಆಗಲೇ ಆ ಜನಾಂಗದ ನಾಶ ಸನ್ನಿಹಿತ ವಾದಂತೆ. (ಕೃತಿಶ್ರೇಣಿ, ೨.೪೧)
>
> **ಕಟ್ಟುನಿಟ್ಟಾದ ಬ್ರಹ್ಮಚರ್ಯದ ಅಭ್ಯಾಸದಿಂದ ಎಲ್ಲ ವಿದ್ಯೆಯ ಕಲಿಕೆ ಅತ್ಯಲ್ಪ ಕಾಲದಲ್ಲೇ ಕರತಲಾಮಲಕವಾಗುತ್ತದೆಂಬುದನ್ನು ನೀವು ಗಮನಿಸಿಲ್ಲವೆ? ಒಮ್ಮೆಯಷ್ಟೇ ಓದಿದ್ದನ್ನು ಅಥವಾ ಕೇಳಿದ್ದನ್ನು ಮರೆಯದೆ ಇರುವಂಥ ಜ್ಞಾಪಕಶಕ್ತಿ ಬ್ರಹ್ಮಚರ್ಯದಿಂದ ಬರುವುದು. ನಮ್ಮ ದೇಶದಲ್ಲಿ ಬ್ರಹ್ಮಚರ್ಯದ ಅಭಾವದಿಂದ ಎಲ್ಲವೂ ವಿನಾಶದ ಅಂಚಿನಲ್ಲಿರುವುದು. (ಕೃತಿಶ್ರೇಣಿ, ೮.೨೨೧)**
>
> –*ಸ್ವಾಮಿ ವಿವೇಕಾನಂದ*

ಬ್ರಹ್ಮಚರ್ಯವೇ ಸಮಾಜದ ಅಡಿಪಾಯ; ನೈತಿಕತೆಯ ಆಧಾರ ಸ್ತಂಭ; ಎಲ್ಲ ಕಲಿಕೆಯ ಮೂಲ. ಇದು ಭಾರತೀಯ ದೃಷ್ಟಿ. ಆದರೆ, ಇಂದು ಪತ್ರಿಕೆಗಳು, ದೂರದರ್ಶನ, ಸಿನೇಮಾಗಳ ಮೂಲಕ ಯುವ ಜನರಲ್ಲಿ ಮತ್ತು ಶಾಲಾಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಕೂಡ ವ್ಯಭಿಚಾರದ, ಅವಿವೇಕದ ವರ್ತನೆ ಬೆಳೆಯುತ್ತಿರುವುದನ್ನು ನಾವು ಕಾಣುತ್ತೇವೆ. ಆದರೂ ಸಮಾಜವು ನೈತಿಕ ಭ್ರಷ್ಟಾಚಾರದ ಈ ಚಿಹ್ನೆ ಗಳನ್ನು ಸಹಿಸಿಕೊಂಡು, ಇವುಗಳ ಬಗ್ಗೆ ಔದಾಸೀನ್ಯ ತೋರುತ್ತಿರುವುದು ಕಳವಳಕ್ಕೆ ಕಾರಣವಾಗಿದೆ.

ಆಧ್ಯಾತ್ಮಿಕತೆಯು ಲೌಕಿಕರಿಗೆ ಮಾರ್ಗದರ್ಶನ ನೀಡಬೇಕು

ಶ್ರೀರಾಮಕೃಷ್ಣರು ಒಂದು ದೃಷ್ಟಾಂತಕಥೆ ಹೇಳುತ್ತಿದ್ದರು: ಒಂದಾ ನೊಂದು ಕಾಲದಲ್ಲಿ ಮರಕಡಿಯುವವನೊಬ್ಬ ಕಾಡಿಗೆ ಹೋದಾಗ, ಅವನಿಗೆ ಒಬ್ಬ ಬ್ರಹ್ಮಚಾರಿಯ ಭೇಟಿಯಾಯಿತು. ಅವನು ಹೀಗೆಂದ: **"ಮುಂದೆ ಸಾಗು, ಮುಂದೆ ಸಾಗು."** ಹಲವು ದಿವಸಗಳ ಕಾಲ ಬ್ರಹ್ಮ ಚಾರಿಯ ಮಾತನ್ನೇ ಚಿಂತಿಸುತ್ತ, ಕಾಡಿನಲ್ಲಿ ಮುಂದೆ ಮುಂದೆ ಹೋದಾಗ ಕ್ರಮವಾಗಿ ಅವನಿಗೆ ಗಂಧ, ಬೆಳ್ಳಿ, ಚಿನ್ನಗಳೇ ದೊರೆಯಿತು!

ಮೇಲ್ನೋಟಕ್ಕೆ ಈ ದೃಷ್ಟಾಂತ ಕಥೆಯು ಧ್ಯೇಯಸಾಧನೆಗೆ ಪ್ರಯತ್ನ ಮತ್ತು ಪರಿಶ್ರಮ ಅಗತ್ಯವೆಂದು ಸೂಚಿಸಿದರೂ, ಇದು ನಮ್ಮ ಮೌಲ್ಯ ವ್ಯವಸ್ಥೆಯ ಮೂಲಾಧಾರವನ್ನು ಪ್ರಕಟಿಸುತ್ತದೆ. **ಲೌಕಿಕರಿಗೆ ಆಧ್ಯಾತ್ಮಿಕ ವ್ಯಕ್ತಿಗಳು ಶಿಕ್ಷಣ** ಹಾಗೂ ಮಾರ್ಗದರ್ಶನಗಳನ್ನು ಸದಾ ನೀಡಬೇಕು

ಪ್ರಾಚೀನ ಕಾಲದಲ್ಲಿ, ಲೌಕಿಕ ಅಧಿಕಾರದ ಮೇಲೆ ಧಾರ್ಮಿಕ ವ್ಯಕ್ತಿಗಳ, ಪೂಜ್ಯರ ಸತ್‌ಪ್ರಭಾವವಿರುತ್ತಿತ್ತು. ರಾಜಾಧಿರಾಜರು ಕೂಡ ತಮ್ಮ ಆಧ್ಯಾತ್ಮಿಕ ಗುರುಗಳಿಗೆ ವಿಧೇಯರಾಗಿ ರಾಜ್ಯಭಾರ ನಡೆಸುತ್ತಿದ್ದರು.

ಬ್ರಹ್ಮಚಾರಿಯ ಬಗೆಗೆ ಮರಕಡಿಯುವವನಿಗಿದ್ದ ಗೌರವವೇ ಅವನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಯಿತು. ಬ್ರಹ್ಮಚಾರಿಯ ಮಾತಿನ ಮೇಲೆ ಶ್ರದ್ಧೆಯಿರಿಸಿ, ಕಾರ್ಯಪ್ರವೃತ್ತನಾದುದರಿಂದಲೇ ಅವನು ಶ್ರೀಮಂತನಾಗಲು ಸಾಧ್ಯವಾಯಿತು. ಈ ಕಥೆಯ ಬ್ರಹ್ಮಚಾರಿ, ವ್ಯಕ್ತಿಯ ಆಧ್ಯಾತ್ಮಿಕ ಆಯಾಮದ ಪ್ರತಿನಿಧಿಯೆನಿಸುತ್ತಾನೆ. ಅವನು ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಪ್ರತಿನಿಧಿಸುತ್ತಾನೆ. ಅವನ ನೀತಿ–ಕೇಂದ್ರಿತ ಜೀವನದ ಗುರಿ, ಸತ್ಯಾನ್ವೇಷಣೆ. ಇಂತಹವರಿಂದಲೇ ಸಮಾಜಕ್ಕೆ ಸೂಕ್ತ ಮಾರ್ಗದರ್ಶನ ಸಿಗಲು ಸಾಧ್ಯ.

ಎರಡುದಿಸೆಗಳಲ್ಲಿ ಮುಂದೆ ಸಾಗುವುದು

ಮುಂದೆ ಸಾಗುವ ಎರಡು ದಾರಿಗಳಿವೆ. ಬಾಹ್ಯ ಜಗತ್ತಿನ ದಾರಿ ಒಂದಾದರೆ, ಇನ್ನೊಂದು ಸ್ವಂತ ವ್ಯಕ್ತಿತ್ವದ ಒಳಗಿನ ದಾರಿ. ಈ ಎರಡು ದಾರಿಗಳಲ್ಲಿಯೂ ನಾವು ಮುಂದೆ ಸಾಗಬೇಕು. ಆಗ ಪ್ರಾಪಂಚಿಕವಾಗಿ ಅಭಿವೃದ್ಧಿ ಹೊಂದುವುದರೊಂದಿಗೆ, ಸಚ್ಚಾರಿತ್ರ್ಯ ನಿರ್ಮಾಣ ಹಾಗೂ ಆಧ್ಯಾತ್ಮಿಕ ಬೆಳವಣಿಗೆ ಹೊಂದುವುದೂ ಕಷ್ಟವೆನಿಸುವುದಿಲ್ಲ.

ಪ್ರಾಪಂಚಿಕ ಅಭಿವೃದ್ಧಿಯತ್ತ ಸಾಗುವ ನಮ್ಮ ದಾರಿಗೆ ಆಧ್ಯಾತ್ಮಿಕ ಪ್ರಜ್ಞೆಯ ನಿಯಂತ್ರಣ ಮತ್ತು ಮಾರ್ಗದರ್ಶನ ಅಗತ್ಯ. ಅಂತರಂಗದ ಪಯಣದಿಂದ ಆಧ್ಯಾತ್ಮಿಕ ಜಾಗೃತಿಯನ್ನು ಸಾಧಿಸಲು ಸಾಧ್ಯ. ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅಂತರಂಗದ ಬೆಳವಣಿಗೆಯನ್ನು ಸುಗಮಗೊಳಿಸಬಹುದು.

ಅಂತರಂಗದಲ್ಲಿ ಒಳ್ಳೆಯ ಶೀಲಸ್ವಭಾವಗಳನ್ನು ಬೆಳೆಸಿಕೊಳ್ಳದೆ ಇದ್ದರೆ, ನಮ್ಮ ಬಾಹ್ಯ ಚಟುವಟಿಕೆಗಳು ಕ್ರಮೇಣ ಅಪಾಯಕ್ಕೆ ಒಳಗಾಗುತ್ತವೆ. ನಾವು ಆಂತರಿಕ ಬೆಳವಣಿಗೆಯನ್ನು ಕಡೆಗಣಿಸುತ್ತೇವೆ; ನಮ್ಮ ಮನಸ್ಸು ಹೊರಮುಖವಾಗುತ್ತದೆ. ಬರಬರುತ್ತಾ ಮನಸ್ಸಿನ ಮೇಲಿನ ನಮ್ಮ ನಿಯಂತ್ರಣ ಸಾಮರ್ಥ್ಯ ಕಡಮೆಯಾಗಿ ನಾವು ಇತರ ವ್ಯಕ್ತಿಗಳ, ಸನ್ನಿವೇಶಗಳ "ಅಧೀನ" ರಾಗುತ್ತೇವೆ. ಆಗ ಆಂತರಿಕ ಸಮತೋಲನವನ್ನು ಕಳೆದುಕೊಂಡು, ಜೀವನದಲ್ಲಿ ಎದುರಾಗುವ ಪ್ರತಿಕೂಲ ಸನ್ನಿವೇಶಗಳನ್ನು ಯಶಸ್ವಿಯಾಗಿ ಎದುರಿಸಲಾಗದೆ, ಧೃತಿಗೆಡುತ್ತೇವೆ.

ಸಂಸ್ಕೃತಿಯಿಲ್ಲದೆ ನೈಜ ಸಾಮಾಜಿಕ ಬೆಳವಣಿಗೆಯಾಗುವುದಿಲ್ಲ

ಆಧ್ಯಾತ್ಮಿಕ ಸಂಸ್ಕೃತಿಯನ್ನು ಬೆಳೆಸಿಕೊಳ್ಳದಿದ್ದರೆ, ಕೃಷಿ, ಉದ್ಯಮ, ಆರೋಗ್ಯ, ತಂತ್ರಜ್ಞಾನ, ನಿರ್ಮಾಣ ಕಾರ್ಯ ಮತ್ತು ಸಂವಹನಗಳಂತಹ ಕ್ಷೇತ್ರಗಳ ಬೆಳವಣಿಗೆ ಸಾಧ್ಯವಾಗುವುದಿಲ್ಲ. ಎಲ್ಲ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳೂ ವಿಫಲವಾಗುತ್ತವೆ; ಜನರ ದುಃಖಸಂಕಟಗಳನ್ನು ನಿವಾರಿಸುವುದು ಅಸಾಧ್ಯವಾಗುತ್ತದೆ. ಏಕೆಂದರೆ, ಸಂಸ್ಕೃತಿಯೇ ಮಾನವನ ಗುಣಸ್ವಭಾವಗಳನ್ನು ರೂಪಿಸುತ್ತದೆ. "ಜ್ಞಾನಸಮಾಜ" ವನ್ನು ಸೃಷ್ಟಿಸುವ ವಿಶಿಷ್ಟ ಆಧುನಿಕ ಶಿಕ್ಷಣದತ್ತ ನಮ್ಮ ವಿದ್ಯಾರ್ಥಿಗಳನ್ನು ಸೆಳೆಯಬೇಕು. ವಿವೇಕಾನಂದರ ಈ ನುಡಿಗಳನ್ನು ಗಂಭೀರವಾಗಿ ಪರಿಗಣಿಸಬೇಕು: " ಆಘಾತಗಳನ್ನು ತಡೆದುಕೊಳ್ಳುವುದು ಸಂಸ್ಕೃತಿಯೇ ಹೊರತು, ಬರಿಯ ಜ್ಞಾನರಾಶಿಯಲ್ಲ...ಜ್ಞಾನವೆಂಬುದು ಬರಿಯ ಹೊರ ಹೊದಿಕೆ ಮಾತ್ರ... ಪವಿತ್ರತೆ ಇಲ್ಲದ ಜ್ಞಾನ ಮತ್ತು ಅಧಿಕಾರಗಳ ಅಮಲು ಮನುಷ್ಯರನ್ನು ದೆವ್ವಗಳನ್ನಾಗಿಸುವುದು."

ಪ್ರತಿದಿನವೂ ಹೊಸ ಹೊಸ ರೂಪಗಳನ್ನು ಪಡೆಯುವ ನಮ್ಮ ಸಂಮಿಶ್ರ ಸಂಸ್ಕೃತಿಯನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿದೆ. ಮುಂದಿನ ತಲೆಮಾರಿನ ಒಳಿತಿಗಾಗಿ ನಮ್ಮ ಸಂಸ್ಕೃತಿಯಲ್ಲಿ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳು ಬಲವಾಗಿ ಬೇರೂರುವಂತೆ ಮಾಡಬೇಕು. ಇಂದ್ರಿಯದಾಸ್ಯದಿಂದ ಕೆಲಮಟ್ಟಿನ ಬಿಡುಗಡೆಯನ್ನಾದರೂ ಪಡೆಯಲು ಸಾಧ್ಯವಾಗುವಂತಹ ಕಾರ್ಯವನ್ನು ನಾವು ಸಾಧಿಸಬೇಕು. ಆಗ ಮಾತ್ರ ರಾಷ್ಟ್ರೀಯ ಜೀವನದಲ್ಲಿ ಶಾಂತಿ, ಸಂತೋಷ, ಪರಿಪೂರ್ಣತೆಗಳು ನೆಲೆಸುತ್ತವೆ. ಆಂತರಿಕ ಸ್ವಾತಂತ್ರ್ಯವಿಲ್ಲದ ಲೌಕಿಕ ಅಭಿವೃದ್ಧಿಯು 'ಮಹಾಭಾರತದ ಕೌರವರ ಏಳ್ಗೆ' ಯಂತೆ. ಅದು ಅಂತಿಮವಾಗಿ ನಮ್ಮ ವಿನಾಶಕ್ಕೆ ಕಾರಣವಾಗುವ, ಆಂತರಿಕ ದಾರಿದ್ರ್ಯದ ಜೀವನವಾಗಿ ಬಿಡುತ್ತದೆ.

ಆಂತರಿಕ ದಾಸ್ಯವು ಮುಂದುವರಿಯುವುದರಿಂದ ಬುದ್ಧಿಸ್ವಾತಂತ್ರ್ಯ ನಷ್ಟವಾಗಬಹುದು. ನೇರವಾಗಿ ಹೇಳುವುದಾದರೆ, ಆಂತರಿಕ ಸ್ವಾತಂತ್ರ್ಯವನ್ನು ಗಳಿಸುವುದು ಬಹುಮುಖ್ಯ. ತನ್ನ ಆಲೋಚನೆಗಳು, ಭಾವೋದ್ವೇಗಗಳು ಮತ್ತು ಕಾರ್ಯಚಟುವಟಿಕೆಗಳ ಮೇಲೆ ಸಂಪೂರ್ಣ ಪ್ರಭುತ್ವವನ್ನು ಹೊಂದಿರುವ, ತನಗೆ ತಾನೇ ಪ್ರಭುವಾಗಿರುವ ವ್ಯಕ್ತಿಯ ಮೇಲೆ ಬೇರೆ ಯಾರೂ ಅಧಿಕಾರ ನಡೆಸಲಾರರು. ಅದಕ್ಕೆ ವಿರುದ್ಧವಾಗಿ, ಇಂದ್ರಿಯಗಳಿಗೆ ದಾಸನಾಗಿರುವವನನ್ನು ಯಾರೂ ರಕ್ಷಿಸಲಾರರು. **ನಮ್ಮ ದೇಶದ ಸ್ವಾತಂತ್ರ್ಯ ನಮ್ಮ ಸೈನ್ಯದ ಅಥವಾ ಆರ್ಥಿಕತೆಯ ಬಲವನ್ನು ಅವಲಂಬಿಸಿಲ್ಲ. ಅದು ಅವಲಂಬಿಸಿರುವುದು ನಮ್ಮ ವೈಯಕ್ತಿಕ ಗುಣ ಸ್ವಭಾವಗಳ ಬಲವನ್ನು.**

ಚಾರಿತ್ರ್ಯನಿರ್ಮಾಣವೇ ರಾಷ್ಟ್ರೀಯ ಧ್ಯೇಯ

ಆದುದರಿಂದ ಚಾರಿತ್ರ್ಯ ನಿರ್ಮಾಣಕ್ಕೆ ಒಟ್ಟುಗೂಡಿ ಪ್ರಯತ್ನ ಮಾಡುವುದು ಇಂದಿನ ಅತ್ಯಂತ ಮುಖ್ಯ ಕಾರ್ಯವಾಗಿದೆ. ಇದನ್ನು ಇಡೀ ಸಮಾಜವು ಕೈಗೊಳ್ಳಬೇಕು. ನಮ್ಮ ಯುವಜನರಲ್ಲಿ ಮೌಲ್ಯಗಳ ಬಗ್ಗೆ ಇರುವ ಗೊಂದಲವನ್ನು ನಿವಾರಿಸಿ, ಅವರಲ್ಲಿ ತಿಳಿವಳಿಕೆಯನ್ನುಂಟುಮಾಡಲು ಇದೊಂದೇ ರಾಜಮಾರ್ಗ.

ಸ್ವಾತಂತ್ರ್ಯ ಲಭಿಸಿದ ಅನಂತರದಲ್ಲಿ ಭಾರತದಲ್ಲಿ ಹಸಿರುಕ್ರಾಂತಿ, ಶ್ವೇತಕ್ರಾಂತಿಗಳಂತಹ ಯಶಸ್ವಿ ಕಾರ್ಯಕ್ರಮಗಳ ಮೂಲಕ, ಪರಿಣಾಮಕಾರಿಯಾದ ಸಾಮಾಜಿಕ ಬದಲಾವಣೆಗಳೂ, ಸುಧಾರಣೆಗಳೂ ಆಗಿವೆ. ಈಗ ನೈತಿಕ ಮತ್ತು ಆಧ್ಯಾತ್ಮಿಕ ಜ್ಞಾನೋದಯ ಮತ್ತು ಪುನರುಜ್ಜೀವನಕ್ಕಾಗಿ ಚಾರಿತ್ರ್ಯವರ್ಧನಾಕ್ರಾಂತಿಯನ್ನು ಪ್ರಾರಂಭಿಸಬೇಕಾಗಿದೆ. ಸ್ವಾಮಿ ವಿವೇಕಾನಂದರ ಈ ಮಾತುಗಳು ನಮ್ಮ ಕಿವಿಗಳಲ್ಲಿ ಇನ್ನೊಮ್ಮೆ ಪ್ರತಿಧ್ವನಿಸಲಿ:

"ಸಹೋದರರೇ, ಎಲ್ಲರೂ ಕಷ್ಟಪಟ್ಟು ದುಡಿಯೋಣ, ನಿದ್ರೆಗೆ ಸಮಯವಲ್ಲ ಇದು. ನಮ್ಮ ಇಂದಿನ ಕಾರ್ಯದ ಮೇಲೆ ಭವಿಷ್ಯಭಾರತ ನಿಂತಿದೆ. ಜಾಗೃತರಾಗಿ, ಏಳಿ, ಎದ್ದುನಿಲ್ಲಿ."

(ಮುಂದಿನ ತಿಂಗಳ ವಿಷಯ : ವೈಯಕ್ತಿಕ ಆದರ್ಶದ ಪ್ರಭಾವ)

(ಕೃಪೆ:Parents and Teachers in Value Education, Publisher: Ramakrishna Mission, Belur Math)

(ಸಂಗ್ರಹಾನುವಾದ: ಶ್ರೀ ಶಂಸ ಐತಾಳ, ಮೈಸೂರು)

(ಪೋಷಕರೆ ಮತ್ತು ಶಿಕ್ಷಕರೆ, ಈ ಅಂಕಣದ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಬರೆದು ಕಳುಹಿಸಿ– ಸಂ.)